ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿಸಿ ನಂ 143/2026

ಸಿ ಡಬ್ಯ್ಲುಃ–09 /ಪಿ ಡಬ್ಲ್ಯು ಃ-04

| | |
|---|---|
| ಸಾಕ್ಷಿದಾರರ ಹೆಸರು | ಃ ಅಂಜನಪ್ಪ |
| ತಂದೆಯ ಹೆಸರು | ಃ ಕೆಂಚಪ್ಪ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ಕೂಲಿ ಕೆಲಸ |
| ವಾಸಸ್ಥಳ | ಃ ಮಾವಿನಕಟ್ಟೆ, ಹೊಸದುರ್ಗ ತಾಲೂಕು. |

ದಿನಾಂಕಃ 07-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಮೃತ ಕೃಷ್ಣಮೂರ್ತಿ ಇವರ ಪರಿಚಯ ಇರುತ್ತದೆ. ಆರೋಪಿಯನ್ನು ನೋಡಿರುತ್ತೇನೆ. ಚಾಸಾ-10 ರವರನ್ನು ನೋಡಿರುತ್ತೇನೆ. ಚಾಸಾ-1 ರವರ ಪರಿಚಯ ಇರುತ್ತದೆ. ದಿಃ 11.12.2025 ರಂದು ನಾನು ಮತ್ತು ನಮ್ಮೂರಿನ ಕೃಷ್ಣ ಮೂರ್ತಿ ಇವರು ಹಾತೂರಿನ ಪ್ರಸನ್ನ ರವರ ಮನೆಗೆ ಅಡಿಕೆ ಕೆಲಸಕ್ಕೆ ಬಂದಿದ್ದು, ದಿಃ 12.12.2025 ರಂದು ಪ್ರಸನ್ನ ಅವರು ನನ್ನನ್ನು ಮತ್ತು ಕೃಷ್ಣ ಮೂರ್ತಿ ಇವರನ್ನು ಅಡಿಕೆ ಲೋಡ್ ಮಾಡಿಕೊಂಡು ಬರಲು ಕರೆದುಕೊಂಡು ಹೋಗಿದ್ದು, ಧನುಷ್ ಎಂಬುವವರು ಟ್ರಾಕ್ಟರ ಅನ್ನು ತೆಗೆದುಕೊಂಡು ಬಂದಿದ್ದು, ಸದರಿ ಟ್ರಾಕ್ಟರ್ ಗೆ ನಾನು ಮತ್ತು ಕೃಷ್ಣ ಮೂರ್ತಿ ತೋಟದಲ್ಲಿ ಇದ್ದ 30 ಚೀಲ ಅಡಿಕೆಯನ್ನು ಟ್ರಾಕ್ಟರ್ ಗೆ ಲೋಡ್ ಮಾಡಿ ಟ್ರಾಕ್ಟರ್ ತೆಗೆದುಕೊಂಡು ಹೋಗಲು ಪ್ರಸನ್ನ ಅವರು ಧನುಷ್ ಅವರಿಗೆ ಹೇಳಿದ್ದು, ನಂತರ ಸದರಿ ಟ್ರಾಕ್ಟರ್ ಟ್ರೆಲರ್ ನ ಅಡಿಕೆ ಮೂಟೆಗಳ ಮೇಲೆ ಕೃಷ್ಣ ಮೂರ್ತಿ ಕುಳಿತಿದ್ದು, ನಾನು ಮತ್ತು ಪ್ರಸನ್ನ ಇವರು ಬೈಕ್ ನಲ್ಲಿ ಟ್ರಾಕ್ಟರ್ ಹಿಂದುಗಡೆ ಹೋಗುತ್ತಿದ್ದು, ಸಂಜೆ 5.00 ಗಂಟೆ ಸುಮಾರಿಗೆ ಗುಡ್ಡೆ ಹಳ್ಳ ಕ್ರಾಸ್ ನಿಂದ ಮುಂದೆ ಹೋಗುತ್ತಿದ್ದಾಗ ನಾಯಿ ರಸ್ತೆಗೆ ಅಡ್ಡ ಬಂದಿದ್ದರಿಂದ ಟ್ರಾಕ್ಟರ್ ಅನ್ನು ಬಲಕ್ಕೆ ತಿರುಗಸಿದ ಕಾರಣ ಟ್ರಾಕ್ಟರ್ ಮೇಲೆ ಕುಳಿತಿದ್ದ ಕೃಷ್ಣ ಮೂರ್ತಿ ಇವರು ಕೆಳಕ್ಕೆ ಬಿದ್ದು, ಅವರ ಮೈಕೈಗೆ ಸೊಂಟದ ಹತ್ತಿರ ರಕ್ತಗಾಯವಾಗಿದ್ದು, ಅವರನ್ನು ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೊದಕೊಂಡು ಹೋಗಿದ್ದು, ಅಲ್ಲಿಂದ ಅವರನ್ನು ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಸ್ತೆ ಮಾರ್ಗದಲ್ಲಿ ಮೃತ ಪಟ್ಟಿದ್ದು, ನಾನು ಸದರಿ ವಿಚಾರವನ್ನು ಅವರ ಅಣ್ಣನಾದ ನಾಗರಾಜ ಇವರಿಗೆ ಪೋನ್ ಮುಖಾಂತರ ತಿಳಿಸಿದ್ದು, ಮೃತ ಕೃಷ್ಣ ಮೂರ್ತಿ ಇವರನ್ನು ಎನ್.ಆರ್. ಪುರ ಸರ್ಕಾರಿ ಆಸ್ಪತ್ರೆ ಶವಗಾರಕ್ಕೆ ತಂದಿದ್ದು, ಸದರಿ ವಿಚಾರವನ್ನು ಅವರ ಅಣ್ಣ ಬಂದು ಹೇಳಿದ ನಂತರ ಅವರು ದೂರನ್ನು

ಕೊಟ್ಟಿರುತ್ತಾರೆ. ನಂತರ ಪೋಲಿಸರು ಅಪಘಾತ ಸ್ಥಳಕ್ಕೆ ಬಂದಾಗ ನಾನು ಸದರಿ ಸ್ಥಳವನ್ನು ತೋರಿಸಿ ಮಹಜರ್ ಗೆ ಸಹಿ ಮಾಡಿರುತ್ತೇನೆ ಹಾಗೂ ಈ ಸಂಬಂಧ ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**2.** ದಿ: 13.12.2025 ರಂದು ಕೃತ್ಯ ಸ್ಥಳವನ್ನು ನಾನು ತೋರಿಸಿದ್ದು, ಆ ಕಾಲಕ್ಕೆ ಕೇಶವ ಮೂರ್ತಿ ಹಾಗೂ ಇನ್ನೊಬ್ಬರು ಹಾಜರಿದ್ದು, ಸದರಿ ಸ್ಥಳದ ಮಹಜರ್ ಅನ್ನು ಮಾಡಿ ಭಾವಚಿತ್ರವನ್ನು ತೆಗೆದಿರುತ್ತಾರೆ ಮತ್ತು ಅದೇ ದಿನ ಪ್ರಸನ್ನ ಇವರ ಮನೆಯ ಮುಂದೆ ನನ್ನ ಮತ್ತು ಕೇಶವ ಹಾಗೂ ಇನ್ನೊಬ್ಬರ ಸಮಕ್ಷಮ ಅಮಾನತು ಮಹಜರ್ ಅನ್ನು ಸಂಜೆ 6.00 ಗಂಟೆಯ ನಂತರ ಮಾಡಿ ಆ ಕಾಲಕ್ಕೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ.

**3.** ಸಾಕ್ಷಿಯು ದಿ: 13.12.2025 ರಂದು ಮಾಡಿದ ಕೃತ್ಯ ಸ್ಥಳದ ಮಹಜರ್ ಅನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಅನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಭಾವಚಿತ್ರ ಇರುವ 3 ಪೋಟೋಗಳನ್ನು ನೋಡಿ ಗುರುತಿಸಿದ್ದು ಸದರಿ ಪೋಟೋಗಳನ್ನು ಈಗಾಗಲೇ ನಿಪಿ- 4 ರಿಂದ ನಿಪಿ-6 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ದಿ: 13.12.2025 ರಂದು ಮಾಡಿದ ಅಮಾನತು ಮಹಜರ್ ಅನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಅನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಭಾವಚಿತ್ರ ಇರುವ 4 ಪೋಟೋಗಳನ್ನು ನೋಡಿ ಗುರುತಿಸಿದ್ದು ಸದರಿ ಪೋಟೋಗಳನ್ನು ಈಗಾಗಲೇ ನಿಪಿ-7 ರಿಂದ ನಿಪಿ-10 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿಕೊಂಡಿದ್ದು, ಪರಿಗಣಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

**1.** ಆರೋಪಿ ಆ ದಿನ ಟ್ರಾಕ್ಟರ್ ಅನ್ನು ಅತೀ ವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದ ಕಾರಣ ಕೃಷ್ಣ ಮೂರ್ತಿ ಮೃತ ಪಟ್ಟಿರುತ್ತಾನೆ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ, ದೂರ ಇದ್ದೇ ಎಂದು ಉತ್ತರಿಸಿರುತ್ತಾರೆ. ಆ ದಿನ ಆರೋಪಿಯು ಟ್ರಾಕ್ಟರ್ ಅನ್ನು ದುಡುಕು ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬರುತ್ತಿದ್ದರು ಸಹ ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ G.D.ವಕೀಲರಿಂದಃ</u>

1. ನಾವು ಆ ದಿನ ಚಿಟ್ಟಿ ಕುಡಿಗೆ ಯಲ್ಲಿ ಅಡಿಕೆ ಲೋಡ್ ಮಾಡುತ್ತಿದ್ದೇವು ಎಂದರೆ ಸರಿ. ಆ ದಿನ ಟ್ರಾಕ್ಟರ್ ಗೆ ಲೋಡ್ ಮಾಡಿ 5.00 ಗಂಟೆಗೆ ಹೊರಟಿರುತ್ತದೆ. ಚಿಟ್ಟಿಕೊಡಿಗೆಯಿಂದ ಗುಡ್ಡೆಹಳ್ಳ ಕ್ರಾಸ್ 1 ಕಿ.ಮೀ. ದೂರದಲ್ಲಿ ಇರುತ್ತದೆ ಎಂದರೆ ಸರಿ. 1 ಕಿ.ಮೀ. ತಲುಪಲು ಟ್ರಾಕ್ಟರ್ ಗೆ 10 ನಿಮಿಷಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಂಡಿರುತ್ತದೆ ಎಂದರೆ ಸರಿ. ನಾನು ಮತ್ತು ಪ್ರಸನ್ನ ಬೈಕಿನಿಂದ ಬರುವ ಕಾಲಕ್ಕೆ ಕೃಷ್ಣ ಮೂರ್ತಿ ಇವರು ಬಿದ್ದಿದ್ದರು ಎಂದರೆ ಸರಿ. ಕೃಷ್ಣ ಮೂರ್ತಿ ಇವರು ಹೇಗೆ ಮತ್ತು ಯಾವ ರೀತಿ ಬಿದ್ದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಅಪಘಾತ ಆದ ದಿವಸವೇ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ, ಆದರೆ ಬೇರೆ ಯಾವತ್ತು ಹೇಳಿಕೆ ಕೊಟ್ಟಿರುವುದಿಲ್ಲ. ಅಪಘಾತ ಆದ ದಿವಸ ಬಿಟ್ಟರೆ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿರುವುದಿಲ್ಲ ಮತ್ತು ಯಾವುದೇ ಹೇಳಿಕೆ ಮಾಡಿಕೊಂಡಿಲ್ಲ ಎಂದರೆ ಸರಿ.
2. ಅಪಘಾತ ಸ್ಥಳದಲ್ಲಿ ಮಾಡಿದ ಮಹಜರ್ ನಲ್ಲಿ ಏನೇನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮಹಜರ್ ಗೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಕೃತ್ಯ ಸ್ಥಳದ ಪಂಚನಾಮೆ ಮಾಡಿರುವುದಿಲ್ಲ ಮತ್ತು ಭಾವಚಿತ್ರಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಅಮಾನತು ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮೂರಿನವರಿದ್ದು ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮಹಜರ್ ಗಳಿಗೆ ಪೋಲಿಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಈ ಕೇಸಿಗೊಸ್ಕರ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ ಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ